

ಓವರ್‌ಫ್ಲೋ ಹಲ್ಲುಗಳು...

ಹಲ್ಲುಗಳೂ ಕಾಯಿಲೆ–ಕಸಾಲೆಯಿಂದ ನರಳುತ್ತವೆ. ಸಂಗದಿಂದ ಸನ್ಯಾಸಿ ಕೆಟ್ಟ ಎನ್ನುವಂತೆ ನಾಲಿಗೆ ಸಹವಾಸದಿಂದ ಹಲ್ಲುಗಳೂ ಕೆಡುತ್ತವೆ. ರುಚಿಗೆ ಜೊಲ್ಲು ಸುರಿಸುವ ನಾಲಿಗೆಯ ಮಾತು ಕೇಳಿ ಹಲ್ಲುಗಳು ಸಿಕ್ಕಿದ್ದನ್ನೆಲ್ಲಾ ಅಗಿದು, ಅರೆದು ತಮ್ಮ ಆರೋಗ್ಯ ಕೆಡಿಸಿಕೊಳ್ಳುತ್ತವೆ. ಹಾಗಂತ ಹಲ್ಲುಗಳು ನಾಲಿಗೆಯ ಸಹವಾಸ ಬಿಡುವಂತಿಲ್ಲ, ಬಿಟ್ಟರೆ ಹಲ್ಲುಗಳು ಕೆಲಸ ಕಳೆದುಕೊಂಡು ನಿರುದ್ಯೋಗಿಯಾಗಿಬಿಡುತ್ತವೆ. ಹಲ್ಲಿಗೆ ಏನೆಲ್ಲಾ ಕಾಯಿಲೆಗಳು ಬರುತ್ತವೆ ಎಂಬುದು ಹಲ್ಲು ಮಾಲೀಕರಿಗೇ ತಿಳಿದಿರುವುದಿಲ್ಲ. ದಂತ ಕುಳಿ, ದಂತ ಕ್ಷಯ, ಉಸಿರಿನ ದುರ್ವಾಸನೆ, ವಸಡು ಬಾಧೆ, ಕೀಟಾಣು ಕಾಟ, ಹುಳುಕು ಹಲ್ಲು, ಕೊಳಕು ಹಲ್ಲು ಮುಂತಾಗಿ ಅಷ್ಟೊಂದು ಕಾಯಿಲೆಗಳು ಕಾಣಿಸಿಕೊಳ್ಳುತ್ತವೆ ಎಂದು ಟೂತ್ ಪೇಸ್ಟ್ ಜಾಹೀರಾತುಗಳು ಜಗಜ್ಜಾಹಿರಾತು ಮಾಡಿ ಗಾಬರಿ ಮಾಡುತ್ತವೆ.

ನಮ್ಮಂತೆ ಹಲ್ಲುಗಳ ಆಯುಷ್ಯೂ ನಿಗದಿಯಾಗಿರುತ್ತದೆ... ವಯಸ್ಸಾದ ಮೇಲೆ ಕೂದಲಿನಂತೆ ಹಲ್ಲುಗಳೂ ಕಳಚಿ ಬೀಳುತ್ತವೆ. ಹೊಟ್ಟೆಯಲ್ಲಿ ಹುಟ್ಟಿದ ಮಕ್ಕಳೇ ಜೊತೆಗಿರಲ್ಲ, ಇನ್ನು ತಡವಾಗಿ ಹುಟ್ಟಿದ ಹಲ್ಲು ಇರುತ್ತವೆಯೇ, ಋಣಾನುಬಂಧ ಇರುವಷ್ಟು ದಿನ ಇರುತ್ತವೆ. ಹಲ್ಲು ಉದುರಿದವು ಎಂದು ಆಕಾಶ ತಲೆ ಮೇಲೆ ಉದುರಿದಂತೆ ನಿರಾಶರಾಗುವಂತಿಲ್ಲ. ಡೆಂಟಲ್ ಡಾಕ್ಟರ್ ಮುಂದೆ ಹೋಗಿ ಹಲ್ಲು ಗಿಂಜಿದರೆ ಸಾಕು ಅವರು ಕಾಯಿಲೆ ಹುಡುಕಿ ಚಿಕಿತ್ಸೆ ಕೊಡುತ್ತಾರೆ. ಬಾಧೆ ನೀಡುವ, ಉಪಯೋಗವಿಲ್ಲದ ಹಲ್ಲುಗಳನ್ನು ಕಿತ್ತು ಬಿಸಾಕಿ, ಅವರವರ ಮೂತಿಗೆ ಒಪ್ಪುವ ಹಲ್ಲು ಸೆಟ್ಟು ಜೋಡಿಸುತ್ತಾರೆ. ಸಣ್ಣಪುಟ್ಟ ಡ್ಯಾಮೇಜ್ ಆಗಿದ್ದರೆ ಬಿಲ್ಡಿಂಗ್ ಕಂಟ್ರಾಕ್ಟರ್ ರೀತಿ ಸಿಮೆಂಟ್ ಹಾಕಿ ಕಾಂಕ್ರೀಟ್ ಮಾಡಿ ಬಂದೋಬಸ್ತ್ ಮಾಡಿ ಇನ್ನಷ್ಟು ಕಾಲ ಹಲ್ಲುಗಳು ಸರ್ವೀಸ್ ಮಾಡಲು ಸಿದ್ಧ ಮಾಡುತ್ತಾರೆ. ವಕ್ರದಂತಗಳಿಗೆ ಕ್ಲಿಪ್ ಹಾಕಿ ಪಳಗಿಸಿ ಸರಿದಾರಿಗೆ ತರುತ್ತಾರೆ. ಕಣ್ಣು, ಕಿಡ್ನಿಯಂತೆ ಹಲ್ಲು ದಾನಿಗಳು ಇಲ್ಲದ ಕಾರಣ ಅವರವರ ಹಲ್ಲನ್ನು ಅವರು ಕಾಪಾಡಿಕೊಳ್ಳಬೇಕು.

ಹಳೇ ಹಲ್ಲುಗಳಿಗೆ ಜೋತು ಬೀಳುವ ಕಾಲ ಇದಲ್ಲ. ತರಾವರಿ ಹಲ್ಲುಸೆಟ್ಟುಗಳು ಮಾರುಕಟ್ಟೆಯಲ್ಲಿವೆ. ಹಳೆ ಹಲ್ಲು ಕಿತ್ತಾಕಿ ಬೇಕಾದ ಡಿಸೈನಿನ ಸೆಟ್ಟು ಬಾಯಿಗಿಟ್ಟು ನಕ್ಕು ಆನಂದಿಸಬಹುದು. ಉಳ್ಳವರು ಚಿನ್ನ, ಬೆಳ್ಳಿಯ ಹಲ್ಲುಸೆಟ್ಟು ಮಾಡಿಸಿಕೊಂಡು ಶ್ರೀಮಂತಿಕೆ ಪ್ರದರ್ಶಿಸುತ್ತಾರೆ. ಆದರೆ ಹುಷಾರು! ಸರಗಳ್ಳರ ರೀತಿ ಹಲ್ಲುಗಳ್ಳರೂ ಇದ್ದಾರೆ. ಕಳ್ಳರು ಹಲ್ಲು ಕಿತ್ತುಕೊಂಡು ಹೋದರೂ ಹುಡುಕಿ ಕೊಡಿ ಎಂದು ಪೊಲೀಸರಿಗೆ ಕಂಪ್ಲೇಂಟ್ ಕೊಡುವ ಪರಿಸ್ಥಿತಿ ತಂದುಕೊಳ್ಳಬಾರದು. ಬ್ಯಾಂಕ್ ಲಾಕರ್‌ನಲ್ಲಿ ಹಲ್ಲುಗಳನ್ನು ಭದ್ರವಾಗಿ ಇಡಲು ಅವಕಾಶವಿದೆ. ಮದುವೆ ಮತ್ತಿತರ ಸಮಾರಂಭಗಳಲ್ಲಿ ಬ್ಯಾಂಕಿನಿಂದ ಬಿಡಿಸಿ ತಂದು ಹಲ್ಲುಸೆಟ್ಟು ಧರಿಸಿ ಮುಗಿದ ನಂತರ ಬ್ಯಾಂಕಿನಲ್ಲಿ ಇಟ್ಟು ಕಾಪಾಡಿಕೊಳ್ಳಬಹುದು. ಆದಾಯ ತೆರಿಗೆಯವರು ದಾಳಿ ಮಾಡಿ ಹಲ್ಲು ಸೆಟ್ಟು ಕಿತ್ತುಕೊಂಡು ಹೋಗಬಹುದು. ಅದಕ್ಕೆ ಸಂಬಂಧಿಸಿದ ದಾಖಲಾತಿಗಳನ್ನು ಇಟ್ಟುಕೊಳ್ಳಬೇಕು. ಗಣೇಶನೇ ಬಿದ್ದು ಹಲ್ಲು ಮುರಿದುಕೊಂಡಿರುವಾಗ ನಮ್ಮಂತ ಹುಲುಮಾನವರು ಬಿದ್ದು ಮುರಿದುಕೊಳ್ಳದೇ ಇರುತ್ತಾರೆಯೇ. ಇಂತಹ ಸಂದರ್ಭಗಳಿಗೆ ನೆರವಾಗಲು ಹಲ್ಲುಗಳಿಗೂ ವಿಮಾ ಸೌಲಭ್ಯ ಒದಗಿಸಬೇಕು.

ಸಾಮರ್ಥ್ಯ, ಸಂದರ್ಭಕ್ಕೆ ತಕ್ಕಂತೆ ಹಲ್ಲು ಬಿಡಬೇಕು. ಇಲ್ಲವಾದರೆ, ಬಡವನ ಕೋಪ ದವಡೆಗೆ ಮೂಲ. ಕಷ್ಟ ಕಾಲದಲ್ಲಿ ಅವರಿವರ ಎದುರು ಹಲ್ಲು ಕಿರಿಯದೆ ಎಷ್ಟೇ ನೋವಾದರೂ ಹಲ್ಲು ಕಚ್ಚಿಕೊಂಡಿರಬೇಕು. ಅವಕಾಶ ಸಿಕ್ಕಾಗೆಲ್ಲಾ ಹಲ್ಲು ಅರಳಿಸಿ ನಗುತ್ತಾ ಇರಬೇಕು.

ಪ್ರತಿಕ್ರಿಯಿಸಿ: **feedback@sudha.co.in**